ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7

Total No. of Questions : 26 ] [ Total No. of Printed Pages : 7

**ಸಂಕೇತ ಸಂಖ್ಯೆ : 444-K (RS)**

**Code No. : 444-K (RS)**

# ಡಿ.ಎಲ್.ಎಡ್. ದ್ವಿತೀಯ ವರ್ಷ

# D.El.Ed. SECOND YEAR

# ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( HPS )
# FIRST LANGUAGE — KANNADA

**(ಪರಿಷ್ಕೃತ ಪಠ್ಯವಸ್ತು)**

**(Revised Syllabus)**

ದಿನಾಂಕ : 15. 05. 2019 ]

Date : 15. 05. 2019 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 2.00 P.M. to 5.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಭಾಷೆ, ಸಂಸ್ಕೃತಿ ಮತ್ತು ಚಿಂತನೆಯ ನಡುವಿನ ಸಂಬಂಧಗಳನ್ನು ವಿವರಿಸಲು ಪ್ರಯತ್ನಿಸಿದವರು

 (A) ಭಾಷಾ ತಜ್ಞರು

 (B) ಸಮಾಜಶಾಸ್ತ್ರಜ್ಞರು

 (C) ಮಾನವಶಾಸ್ತ್ರಜ್ಞರು

 (D) ಇವರೆಲ್ಲರೂ

2. ಆಡುನುಡಿ ಯಾವುದಕ್ಕಿಂತ ಭಿನ್ನವಾಗಿರುತ್ತದೆ

(A) ಗ್ರಾಂಥಿಕ ಕನ್ನಡ

(B) ಪ್ರಾದೇಶಿಕ ಕನ್ನಡ

(C) ಮಾಧ್ಯಮಗಳಲ್ಲಿ ಬಳಸುವ ಕನ್ನಡ

(D) ಮನೆಯ ಭಾಷೆ

3. ಮನೆಯ ಭಾಷೆಯಿಂದ ಶಾಲೆಯ ಭಾಷೆಗೆ ಬದಲಾಗುವ ಸಂದರ್ಭದಲ್ಲಿ ಮನೆಯ ಭಾಷೆಯನ್ನು ಶಿಕ್ಷಕರು

(A) ಗೌರವಿಸಬಾರದು

(B) ಗೌರವಿಸಬೇಕು

(C) ಖಂಡಿಸಬೇಕು

(D) ಒಪ್ಪಿಕೊಳ್ಳಬಾರದು

4. ಕಲಿಕಾದಾರರು ಈ ಕೌಶಲಗಳ ಸಹಾಯದಿಂದ ಹೊಸ ವಿಷಯಗಳನ್ನು ಸ್ವೀಕರಿಸುತ್ತಾರೆ

I. ಓದುವುದು

II. ಬರೆಯುವುದು

III. ಆಲಿಸುವುದು

IV. ಮಾತನಾಡುವುದು

*ಇವುಗಳಲ್ಲಿ :*

(A) I ಮತ್ತು II ಸರಿ (B) I ಮತ್ತು III ಸರಿ

(C) II ಮತ್ತು IV ಸರಿ (D) ಇವುಗಳೆಲ್ಲವೂ ಸರಿ

5. ಕಲಿಕಾದಾರರೇ ತಮ್ಮನ್ನು ಅರ್ಥೈಸಿಕೊಳ್ಳುವಂತೆ ಮಾಡುವ ಮೌಲ್ಯಮಾಪನ

(A) ವ್ಯಕ್ತಿನಿಷ್ಠ ಮೌಲ್ಯಮಾಪನ

(B) ವಸ್ತುನಿಷ್ಠ ಮೌಲ್ಯಮಾಪನ

(C) ಸ್ವ–ಮೌಲ್ಯಮಾಪನ

(D) ರಚನಾತ್ಮಕ ಮೌಲ್ಯಮಾಪನ

6. ಇವುಗಳಲ್ಲಿ ಯಾವುದು ಸಕ್ರಿಯ ಆಲಿಸುವಿಕೆಯ ತಂತ್ರವಾಗಿದೆ

(A) ಕಥೆ ಬರೆಯುವುದು

(B) ವರದಿ ತಯಾರಿಕೆ

(C) ನಾಟಕ ರಚನೆ

(D) ಟಿಪ್ಪಣಿ ಮಾಡಿಕೊಳ್ಳುವುದು

7. ಪ್ರತಿಯೊಬ್ಬರಿಗೂ ಅವರವರ ಅವಶ್ಯಕತೆಗೆ ತಕ್ಕ ಕಲಿಕಾ ಅನುಭವಗಳನ್ನು ನೀಡುವುದು

(A) ಸಾಮಾನ್ಯ ತರಗತಿ

(B) ವಿಶೇಷ ತರಗತಿ

(C) ಒಳಗೊಳ್ಳುವ ತರಗತಿ

(D) ಸಂಪನ್ಮೂಲ ತರಗತಿ

8. ವಿದ್ಯಾರ್ಥಿಗಳಲ್ಲಿ ವಾಕ್ಯರಚನೆ ಮಾಡುವ ಕೌಶಲವನ್ನು ಅಭಿವೃದ್ಧಿಪಡಿಸಲು ಇರುವ ಒಂದು ತಂತ್ರ

(A) ಸವಿಯುವ ವಾಕ್ಯ (B) ಬೆಳೆಯುವ ವಾಕ್ಯ

(C) ಮಾತನಾಡುವ ವಾಕ್ಯ (D) ಓದುವ ವಾಕ್ಯ

9. ಓದಿರುವುದನ್ನು ದೃಶ್ಯೀಕರಿಸಿಕೊಳ್ಳುವುದಕ್ಕೆ ಸಹಕಾರಿಯಾದ ಚಟುವಟಿಕೆ

(A) ಓದಿರುವುದನ್ನು ಬರೆಯುವುದು

(B) ಮುಖ್ಯಾಂಶಗಳನ್ನು ಬರೆಯುವುದು

(C) ಚಿತ್ರಬಿಡಿಸುವುದು

(D) ಓದಿರುವುದನ್ನು ಪುನಃ ಓದುವುದು

10. ಬರವಣಿಗೆ ಒಂದು .......................... ಮಾರ್ಗ.

(A) ಇವುಗಳಲ್ಲಿ ಯಾವುದೂ ಅಲ್ಲ (B) ಚಿಂತನೆಯ

(C) ವ್ಯವಸ್ಥಿತವಲ್ಲದ (D) ಏಕರೂಪತೆಯ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** 5 × 2 = 10

11. ಭಾಷೆಯನ್ನು ಪೋಷಿಸುವ ತರಗತಿಗಳಲ್ಲಿರಬೇಕಾದ ನಾಲ್ಕು ಅಂಶಗಳನ್ನು ತಿಳಿಸಿ.

12. ಸಾಹಿತ್ಯ ಓದಿನಿಂದಾಗುವ ಪ್ರಯೋಜನಗಳನ್ನು ತಿಳಿಸಿ.

13. ಭಾಷಾ ತರಗತಿಯಲ್ಲಿ ಮಕ್ಕಳು ಮನೆಭಾಷೆಯಿಂದ ಶಾಲಾಭಾಷೆಗೆ ಬದಲಾವಣೆ ಹೊಂದುವಲ್ಲಿ ಶಿಕ್ಷಕರಾಗಿ ನೀವು ಹೇಗೆ ಅನುಕೂಲಿಸುವಿರಿ ?

14. ಸ್ವತಂತ್ರ ಕಲಿಕೆಯ ನಾಲ್ಕು ಸಾಮರ್ಥ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

15. ಮೌಖಿಕ ಅಭಿವ್ಯಕ್ತಿ ಬೆಳೆಸುವಲ್ಲಿ ಕಥೆ ಹೇಳುವ ಚಟುವಟಿಕೆ ಮಾಡುವಾಗ ಶಿಕ್ಷಕರು ನೆನಪಿನಲ್ಲಿಡಬೇಕಾದ ಅಂಶಗಳಾವುವು ?

16. ಆಲಿಸುವಿಕೆಯನ್ನು ಮೌಲ್ಯಮಾಪನ ಮಾಡುವಲ್ಲಿ ಬಳಸಬಹುದಾದ ಯಾವುದಾದರೂ ನಾಲ್ಕು ಚಟುವಟಿಕೆಗಳನ್ನು ಪಟ್ಟಿ ಮಾಡಿ.

17. ಕಲಿಕಾದಾರರನ್ನು ಒಳ್ಳೆಯ ಓದುಗಾರರನ್ನಾಗಿಸಲು ಕಲಿಕೆಯನ್ನು ಅನುಕೂಲಿಸುವವರು ಗಮನದಲ್ಲಿಡಬೇಕಾದ ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿ.

18. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಅಭಿವೃದ್ಧಿಪಡಿಸಲು ನೀವು ಅನುಕೂಲಿಸುವ ಯಾವುದಾದರೂ *ಎರಡು ಬರವಣಿಗೆ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.*

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಮತ್ತು 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕ ಮೀರದಂತೆ ಉತ್ತರಿಸಿ :** 8 × 5 = 40

19. ಅ) ನೀವು ಡಿ.ಎಲ್.ಎಡ್. ಕೋರ್ಸ್‌ನಲ್ಲಿ ಅಭ್ಯಾಸ ರೂಢಿಪಾಠ ಅಥವಾ ನಿಕಟಸೇವಾ ತರಬೇತಿಯ ಅವಧಿಯಲ್ಲಿ ಅನೇಕ ಸಾಹಿತ್ಯಿಕ ಚಟುವಟಿಕೆ ಮತ್ತು ರಾಷ್ಟ್ರೀಯ ದಿನಾಚಾರಣೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿದ್ದೀರಿ. ಅದರಲ್ಲಿ ನಿಮಗೆ ಇಷ್ಟವಾದ ಒಂದು ಚಟುವಟಿಕೆ ಕುರಿತು ವರದಿ ತಯಾರಿಸಿ.

*ಅಥವಾ*

ಆ) ಈ ಕೆಳಗಿನ ಪದ್ಯದ ಸಾರಾಂಶವನ್ನು ಬರೆಯಿರಿ.

ನನ್ನ ದೇಹದ ಬೂದಿ – ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ;
ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ನನ್ನ ದೇಹದ ಬೂದಿ – ಹೊಳೆಯಲ್ಲಿ ಹರಿದು ಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ;
ಮುಷ್ಠಿ ಬೂದಿಯ ತಿಂದು – ಪುಷ್ಟವಾಗಲು ಮೀನು,
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ನನ್ನ ದೇಹದ ಬೂದಿ – ಕೊಳದಲ್ಲಿ ಬೀಗಿ ಬಿಡಿ
ತಾವರೆಯು ದಿನದಿನವೂ ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ,
ನಿಜಸೇವೆ ಗೈಯಲಿಕೆ ಬರಲಿ ಮುಂದು.

20. ಅ) ಚಿಂತನೆ ಹಾಗೂ ಸಂವಹನದ ಮಾಧ್ಯಮವಾಗಿ ಭಾಷೆಯ ಕಾರ್ಯಗಳಾವುವು ? ವಿವರಿಸಿ.

***ಅಥವಾ***

ಆ) ಭಾಷಾ ಸಮೃದ್ಧ ತರಗತಿಯನ್ನು ಸಂಘಟಿಸಲು ಶಿಕ್ಷಕರು ಮಾಡಿಕೊಳ್ಳಬೇಕಾದ ಸಿದ್ಧತೆಗಳಾವುವು ? ತಿಳಿಸಿ.

21. ಅ) ವ್ಯಾಕರಣ ಕಲಿಕೆಯ ಹಂತಗಳನ್ನು ಪ್ರತಿನಿಧಿಸುವ ರೇಖನ ಚಿತ್ರವನ್ನು ಬರೆದು, ಉದಾಹರಣೆಯೊಂದಿಗೆ ವಿವರಿಸಿ.

***ಅಥವಾ***

ಆ) ರಚನವಾದ ಸಿದ್ಧಾಂತವು ಆಧರಿಸಿದ ವಿಧಾನವು ಶಿಫಾರಸ್ಸು ಮಾಡಿರುವ ಕಲಿಕೆಯ ಐದು ಹಂತಗಳನ್ನು ಉದಾಹರಣೆಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.

22. ಅ) ಪಾಠಯೋಜನೆ ಎಂದರೇನು ? "ಪಾಠಯೋಜನೆಯು ಯಶಸ್ವಿ ಬೋಧನೆಯ ಕೀಲಿಕೈ ಇದ್ದಂತೆ." ಈ ಹೇಳಿಕೆಯನ್ನು ಕುರಿತು ಚರ್ಚಿಸಿ.

***ಅಥವಾ***

ಆ) ನಿಮ್ಮ ಭಾಷಾ ತರಗತಿಯ ನಿರ್ವಹಣೆಗೆ ಕಲಿಕಾ ಸಂಪನ್ಮೂಲಗಳನ್ನು ಆಯ್ಕೆ ಮಾಡುವಾಗ ನೀವು ಗಮನಿಸಬೇಕಾದ ಅಂಶಗಳನ್ನು ತಿಳಿಸಿ.

23. ಅ) "ಬಹುಭಾಷಾ ತರಗತಿಗಳು ಭಾಷಾ ಕಲಿಕೆಯ ಪ್ರಕ್ರಿಯೆಯನ್ನು ಶ್ರೀಮಂತಗೊಳಿಸುತ್ತವೆ." ಚರ್ಚಿಸಿ.

***ಅಥವಾ***

ಆ) ವಿದ್ಯಾರ್ಥಿಗಳಲ್ಲಿ ಸಕ್ರಿಯ ಆಲಿಸುವಿಕೆಯನ್ನು ಪ್ರೋತ್ಸಾಹಿಸಲು 'ಟಿಪ್ಪಣಿ ಮಾಡಿಕೊಳ್ಳುವುದು' ಮತ್ತು 'ಪ್ರಶ್ನೆ ಕೇಳುವುದು ಮತ್ತು ಕೇಳಲು ಅವಕಾಶ ನೀಡುವುದು' ಈ ತಂತ್ರಗಳನ್ನು ನಿಮ್ಮ ತರಗತಿ ಬೋಧನೆಯಲ್ಲಿ ಹೇಗೆ ಬಳಸಿಕೊಳ್ಳುವಿರಿ ? ವಿವರಿಸಿ.

24. ಅ) ಆಲಿಸುವ ಚಟುವಟಿಕೆಯನ್ನು ಸಂಘಟಿಸುವ ಹಂತಗಳನ್ನು ಉದಾಹರಣೆಯೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.

***ಅಥವಾ***

ಆ) ಒಳಗೊಳ್ಳುವ ತರಗತಿಗಳಲ್ಲಿ ಮೌಖಿಕ ಕೌಶಲಗಳನ್ನು ಹೇಗೆ ಅನುಕೂಲಿಸುವಿರಿ ? ಸಂಕ್ಷಿಪ್ತವಾಗಿ ವಿವರಿಸಿ.

25. ಅ) ಓದನ್ನು ಪ್ರೋತ್ಸಾಹಿಸುವಲ್ಲಿ ತರಗತಿ ಲೈಬ್ರರಿ ಮತ್ತು ಓದುಗರ ಕ್ಲಬ್‌ನ್ನು ನೀವು ಹೇಗೆ ಬಳಸಿಕೊಳ್ಳುವಿರಿ ? ವಿವರಿಸಿ.

**ಅಥವಾ**

ಆ) ಬರವಣಿಗೆ ಪ್ರಕ್ರಿಯೆಯ ಹಂತಗಳನ್ನು ವಿವರಿಸಿ.

26. ಅ) ಸಮರ್ಥ ಓದುಗನಾಗಲು ಓದುವ ಸಾಮರ್ಥ್ಯಗಳು ಅವಶ್ಯಕವೆ ? ಸಮರ್ಥಿಸಿ.

**ಅಥವಾ**

ಆ) 'ಬರವಣಿಗೆಯು ಸ್ವ–ಕಲಿಕೆಯ ಉಪಕರಣವಾಗಿದೆ." ಕಾರಣೀಕರಿಸಿ.